“ಏನಾಗ್ತಿತ್ತೊ... ಅವರವರ ಪಾಲಿಗೆ ಎಲ್ಲಾ ಭೋಲೋನ ಆಗ್ತಿತ್ತು. ಈಗ ಯಾರು ಅಷ್ಟು ನೋಡೂದುಲ್ಲ. ಖರೆ ನಿನ್ನ ಕಥಿ ನೋಡು. ಅಂವಾ ಹೋದಾವಂದು ಇನ್ನೂ ತನಕಾ ಪತ್ತೆ ಇಲ್ಲಾ. ಎಷ್ಟು ಹುಡುಕಿದರೂ ಸಿಗಲಿಲ್ಲ. ಮುಂದ ನೀ ರಾಧಾನ ಕೈಯಾಗ ಬಾಳಬೇಕಲ್ಲಾ” ಎಂದು ನೋವಿನಿಂದಲೇ ಹೇಳಿದ್ದಳು. “ನಿನಗ ಜ್ವರಾ ಹೆಚ್ಚಾಗ್ಯಾವ. ಏನೇನೊ ಮಾತಾಡ್ಲಿಕ್ಕತ್ತಿ. ಏನ ಚಿಂತಿ ಮಾಡಬ್ಯಾಡಾ. ನಾರಾಯಣ ಅಣ್ಣ, ರಮಾ ವೈನಿ ನನ್ನ ಕೈಬಿಡೂದುಲ್ಲ. ಸುಮ್ಮನ ಆರಾಮ ಮಲಕೊ” ಎಂದು ಮಾತ್ರೆ ಕೊಟ್ಟು ನೀರು ಕುಡಿಸಿದ್ದೆ. “ಹೌದು, ನಾರಾಯಣ ಇದ್ದಾನ. ಚಿಂತಿಲ್ಲ” ಎಂದು ಉಸಿರ್ಗರೆಯುತ್ತ ಕಣ್ಮುಚ್ಚಿ ಮಲಗಿದಳು.



ಅದೇ ಅವಳ ಕೊನೆಯ ಮಾತಾಯಿತು. ಮರುದಿನದ ಬೆಳಗು ಶಾಪವಾಗಿ ಮೂಡಿತ್ತು. ನನ್ನ ಬದುಕಿನ ಭರವಸೆಯ ಮತ್ತೊಂದು ಕೊಂಡಿ ಕಳಚಿ ನಿರ್ವಿಣ್ಣಳಾಗಿದ್ದೆ. ಎಲ್ಲರೂ, “ಹೋ...” ಎಂದು ಅತ್ತಿದ್ದೆವು. ನೆರೆಹೊರೆಯವರೆಲ್ಲ, “ಪುಣ್ಯಾತ್ಗಿತ್ತಿ... ಮುತ್ತೈದಿ ಸಾವು ಕಂಡ್ಲು. ಅಳಬ್ಯಾಡ್ರಿ... ಸಮಾಧಾನ ಮಾಡಕೋರಿ” ಎಂದು ಸಂತೈಸಿದರು. ಅಪ್ಪ ಆಕಾಶ ನೋಡುತ್ತ ಕೂತುಬಿಟ್ಟಿದ್ದ. ಆದ ನಷ್ಟ ಆಕಾಶದಷ್ಟೇ ದೊಡ್ಡದಾಗಿತ್ತು.

ಅಷ್ಟೇ ಸಾಕಾಗಿರಲಿಲ್ಲ ವಿಧಿಗೆ. ಆರು ತಿಂಗಳು ಕಳೆದು ಎಲ್ಲರೂ ನಿಸೂರಾಗಿ ಉಸಿರು ಬಿಟ್ಟಿದ್ದರು. ದುಃಖ ಕೊಂಚ ತಹಬಂದಿಗೆ ಬಂದಿತೆನ್ನುವಷ್ಟರಲ್ಲಿ ದೊಡ್ಡಣ್ಣ ಹಾರ್ಟ್ ಅಟ್ಯಾಕಿಗೆ ತುತ್ತಾಗಿದ್ದ. ರಾತ್ರಿ ಮಾಮೂಲಾಗೇ ಮಲಗಿದವ ಮಧ್ಯರಾತ್ರಿ ಜೋರಾಗಿ ಚೀರಿದ್ದ. ವೈದ್ಯರು ಬರುವವರೆಗೆ ಪ್ರಾಣಪಕ್ಷಿ ತಡೆಯಲಿಲ್ಲ. ಇದು ನನಗೂ, ಅಪ್ಪನಿಗೂ ತಾಳಲಾರದ ಹೊಡೆತ. ರಮಾ ವೈನಿಯಂತೂ ಆಘಾತದಿಂದ ಹಾಸಿಗೆ ಹಿಡಿದುಬಿಟ್ಟಿದ್ದರು. ಶ್ರೀಕರ ಅಮೆರಿಕದಿಂದ ಬರಲಾಗಲಿಲ್ಲ. ಶ್ರೀವತ್ಸ ಬೆಂಗಳೂರಿನಿಂದ ಬಂದು ಕಾರ್ಯ ಮುಗಿಸಿಕೊಂಡು ಹೋಗಿದ್ದ. ಕೇಶಣ್ಣ ನೊಂದುಕೊಂಡು ಅತ್ತಿದ್ದ. ಎಷ್ಟಾದರೂ ಒಡಹುಟ್ಟಿದ ಕರುಳು. ರಾಧಾವೈನಿ ಮೇಲೆ ಮೊಸಳೆ ಕಣ್ಣೀರು ಸುರಿಸಿದರೂ ಒಳಗೆ ಸಂತಸ ಪಟ್ಟಿದ್ದರು. ಅವರಿಗೆ ಅಧಿಕಾರ ದೊರೆತಂತಾಗಿತ್ತು. ಅಪ್ಪನಂತೂ ನಡೆದಾಡುವ ಶವವಾಗಿದ್ದ. ಆದರೂ ನನ್ನ ಮೇಲೆ ವಿಪರೀತ ಕಾಳಜಿ. ರಾಧಾವೈನಿ ನನಗೇನಾದರೂ ಕೊಂಕು ಮಾತನಾಡಿದರೆ ಸಿಡಿದೇಳುತ್ತಿದ್ದ. ಖಡಕ್ಕಾಗಿ ಉತ್ತರ ಕೊಡುತ್ತಿದ್ದ. ಒಮ್ಮೆಯಂತೂ ನನ್ನ ತಲೆ ಸವರುತ್ತ, “ಕುಲಕರ್ಣಿ ವಕೀಲ್ರು ಊರಿಗೆ ಹೋಗ್ಯಾರ. ಬಂದ ಕೂಡ್ಲೆ ನಿನ್ನ ಹೆಸರಿಗೆ ಐವತ್ತೆಕರೆ ಬರದಬಿಡತೇನಿ. ಇಲ್ಲದಿದ್ರ ಅಕಿ ಈ ಮನ್ಯಾಗ ನಿನ್ನ ಇರಗೊಡಾಂಗಿಲ್ಲಾ. ಕೇಶ್ಯಾ ಉಪಯೋಗಿಲ್ಲ. ಜೋರು ಕಾ ಗುಲಾಮ” ಎಂದಿದ್ದ. ನಾನು, “ಬ್ಯಾಡಪಾ... ಹಂಗ ಮಾತ್ರ ಮಾಡಬ್ಯಾಡಾ. ಅಕಿ ಇನ್ನಷ್ಟು ಉರೀತಾಳ. ನಾ ನನ್ನ ಪುರ್ತೆಕ ನಾ ಸುಮ್ಮನ ಇದ್ದುಬಿಡತೇನಿ” ಎನ್ನುತ್ತ ಕೈ ಮುಗಿದಿದ್ದೆ. ಅವರ ಕಣ್ಣು ಹನಿದಿದ್ದವು. ಯಾವ